ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 14-11-1978.

# *ಸಮಯದ ಕರೆ* (वक्त की पुकार)

***ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.***

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

ಸದಾ ಸ್ವಯಂನ್ನು ಸರ್ವಶ್ರೇಷ್ಠ ತಂದೆಯ ಡೈರೆಕ್ಟ್ ಈಶ್ವರನ ಸಂತಾನನೆಂದು ತಿಳಿಯುತ್ತಾ ಸದಾ ಸಮರ್ಥ ಸ್ಥಿತಿಯಲ್ಲಿ ಇರುತ್ತೀರಾ? ಹೇಗೆ ತಂದೆಯು ಸದಾ ಸಮರ್ಥವಾಗಿದ್ದಾರೆ ಹಾಗೆಯೇ ತಂದೆಯ ಸಮಾನ ಸಮರ್ಥರಾಗಿದ್ದೀರಾ? ವರ್ತಮಾನ ಸಮಯದನುಸಾರವಾಗಿ ಯಾವಾಗ ತಾವೆಲ್ಲರೂ ಮೊದಲಿನಿಂದಲೂ ಸಮಯದ ಚಾಲೆಂಜ್ ಗನುಸಾರವಾಗಿ ಎವರೆಡಿಯಾಗಿದ್ದೀರೆಂದರೆ ಸಮಯದನುಸಾರವಾಗಿ ಈಗ ವ್ಯರ್ಥದ ಖಾತೆಯು ನಾಮಮಾತ್ರದಲ್ಲಿಯೇ ಇರಬೇಕು. ಹೇಳಿಕೆಯಂತೆ- ಹಿಟ್ಟಿನಲ್ಲಿ ಉಪ್ಪಿನ ಸಮಾನ. ಅದೇರೀತಿ ಸಮರ್ಥತೆಯು ಖಾತೆಯು 99% ಆಗಿರಬೇಕು, ಆಗಲೇ ಭವಿಷ್ಯದ ಹೊಸಪ್ರಪಂಚಕ್ಕಾಗಿ 100% ಸತೋಪ್ರಧಾನ ರಾಜ್ಯದ ಅಧಿಕಾರಿಯಾಗಲು ಸಾಧ್ಯವಾಗುತ್ತದೆ. ಈಗಂತು ಭವಿಷ್ಯರಾಜ್ಯ ಅಥವಾ ತಮ್ಮ ರಾಜ್ಯವು ತಮ್ಮೆಲ್ಲರನ್ನೂ ಆಹ್ವಾನ ಮಾಡುತ್ತಿದೆ, ಯಾರನ್ನು ಆಹ್ವಾನ ಮಾಡುತ್ತಿದೆ? ಸರ್ವಗುಣ ಸಂಪನ್ನ, 16 ಕಲಾಸಂಪೂರ್ಣ ಆತ್ಮರ ಆಹ್ವಾನ ಮಾಡುತ್ತಿದೆ. ಸಮಯದನುಸಾರವಾಗಿ ವರ್ತಮಾನ ಸ್ಥಿತಿಯ ಚಾರ್ಟ್ ತೆಗೆಯಿರಿ- ಸಮರ್ಥತೆಯು ಎಷ್ಟಿದೆ ಮತ್ತು ವ್ಯರ್ಥವು ಎಷ್ಟಿದೆ? ಸಂಕಲ್ಪ ಮತ್ತು ಸಮಯವೆರಡರ ಚಾರ್ಟನ್ನಿಡಿ. ಇಡೀ ದಿನದ ದಿನಚರ್ಯದಲ್ಲಿ ಯಾವ ಖಾತೆಯು ಹೆಚ್ಚಿನದಾಗಿರುತ್ತದೆ! ಒಂದುವೇಳೆ ಈಗಿನವರೆಗೂ ವ್ಯರ್ಥದ ಖಾತೆಯು 50 ಅಥವಾ 60 ಪರ್ಸೆಂಟ್ ಇದೆ, ಅಂದಮೇಲೆ ಇಂತಹ ಫಲಿತಾಂಶವಿರುವವರಿಗೆ ಎಂತಹ ಸಮಯದ ರಾಜ್ಯಾಧಿಕಾರಿ ಎಂದು ಹೇಳುತ್ತಾರೆ? ಏನು ಸತ್ಯಯುಗದ ಮೊದಲ ರಾಜ್ಯವೇ ಅಥವಾ ಸತ್ಯಯುಗದ ಮಧ್ಯಕಾಲವೇ ಅಥವಾ ತ್ರೇತಾದ ಆದಿಕಾಲವೇ? ಯಾವ ಆತ್ಮರಿಗೆ ವರ್ತಮಾನ ಸಮಯ, ಸಂಕಲ್ಪ ಮತ್ತು ಸಮಯದ ಮೇಲೆ ಅಧಿಕಾರವಿರುತ್ತದೆಯೋ ಅವರೇ ಆದಿಕಾಲದ ವಿಶ್ವಾಧಿಕಾರಿಯಾಗಲು ಸಾಧ್ಯ.ಇಂತಹ ಅಧಿಕಾರಿ ಆತ್ಮರೇ ವಿಶ್ವದ ಆತ್ಮರ ಮೂಲಕ ಸತೋಪ್ರಧಾನ ಆದಿಕಾಲದಲ್ಲಿ ಸರ್ವರ ಸತ್ಕಾರವನ್ನು ಪ್ರಾಪ್ತಿ ಮಾಡಿಕೊಳ್ಳಲು ಸಾಧ್ಯವಾಗುತ್ತದೆ.

ಮೊದಲು ಸ್ವರಾಜ್ಯ, ನಂತರ ವಿಶ್ವದ ರಾಜ್ಯ. ಯಾರು ಸ್ವರಾಜ್ಯ ಮಾಡಲು ಸಾಧ್ಯವಿಲ್ಲವೋ ಅವರು ವಿಶ್ವದ ರಾಜ್ಯಾಧಿಕಾರಿ ಆಗಲು ಸಾಧ್ಯವಿಲ್ಲ ಆದ್ದರಿಂದ ಈಗ ತಮ್ಮನ್ನು ತಾವು ಪರಿಶೀಲನೆ ಮಾಡಿಕೊಳ್ಳಿರಿ. ಅಂತರ್ಮುಖಿಯಾಗಿ ಸ್ವಚಿಂತನೆಯಲ್ಲಿರಿ. ಯಾರು

ಆದಿಯಲ್ಲಿ ಮೊದಲ ದಿನದಂದು ಒಗಟನ್ನು ತಿಳಿಸಲಾಗುತ್ತದೆ- "ನಾನು ಯಾರು?" ಈಗ ಮತ್ತೆ ಇದೇ ಒಗಟನ್ನು ತಮ್ಮ ಸಂಪೂರ್ಣ ಸ್ಥಿತಿಯನುಸಾರವಾಗಿದೆ, ಶ್ರೇಷ್ಠ ಸ್ಥಿತಿಯನುಸಾರವಾಗಿ ಪರಿಶೀಲನೆ ಮಾಡಿಕೊಳ್ಳಿರಿ, ವಾಟ್ ಆಮ್ ಐ (ನಾನು ಏನಾಗಿದ್ದೇನೆ). ಈಗ ಈ ಒಗಟನ್ನು ಬಿಡಿಸಬೇಕಾಗಿದೆ. ತಮ್ಮ ಇಡೀ ದಿನ ಸ್ಥಿತಿಯ ಮೂಲಕ ಸ್ವಯಂನ್ನು ತಿಳಿದುಕೊಳ್ಳಬಹುದು- ಆದಿಕಾಲದ ಅಧಿಕಾರಿಯಾಗಿದ್ದೇನೆಯೇ ಅಥವಾ ಸತ್ಯಯುಗದಲ್ಲಿಯೇ ಅಥವಾ ಮಧ್ಯಕಾಲದ ಅಧಿಕಾರಿಯಾಗಿದ್ದೇನೆಯೇ? ಯಾವಾಗ ಆದಿಕಾಲದ ಅಧಿಕಾರಿಯಾಗುವ ಲಕ್ಷ್ಯವಿದೆಯೆಂದರೆ ಅದರನುಸಾರವಾಗಿಯೇ ತಮ್ಮ ವರ್ತಮಾನವನ್ನೂ ಸದಾ ಸಮರ್ಥವನ್ನಾಗಿ ಮಾಡಿಕೊಳ್ಳಿರಿ. ಜ್ಞಾನದ ಮನನದ ಜೊತೆಯಲ್ಲಿ ತಮ್ಮ ಸ್ಥಿತಿಯ ಪರಿಶೀಲನೆಯೂ ಬಹಳ ಅವಶ್ಯಕತೆಯಿದೆ. ಪ್ರತೀದಿನದ ಜಮಾ ಆಗಿರುವ ಖಾತೆಯಲ್ಲಿ ಸ್ವಯಂನಿಂದ ಸಂತುಷ್ಟವಾಗಿದ್ದೀರಾ? ಅಥವಾ ಈಗಿನವರೆಗೂ ಇದನ್ನೇ ಹೇಳುತ್ತೀರಿ- ಎಷ್ಟು ಬಯಸುತ್ತೇನೆಯೋ ಅಷ್ಟು ಆಗಿಲ್ಲ. ಈಗಿನವರೆಗೂ ಇಂತಹ ಫಲಿತಾಂಶವಿರಬಾರದು. ಯಾರು ಸ್ವಯಂನಿಂದ ಸಂತುಷ್ಟವಾಗಿರುವುದಿಲ್ಲವೋ ಅವರು ವಿಶ್ವದ ಆತ್ಮರನ್ನೂ ಸಹ ಹೇಗೆ ಸಂತುಷ್ಟಪಡಿಸುತ್ತಾರೆ. ಸತ್ಯಯುಗದ ಆದಿಕಾಲದ ಆತ್ಮರೇನು! ಪ್ರಕೃತಿಯೂ ಸಂತುಷ್ಟವಾಗಿರುತ್ತದೆ ಏಕೆಂದರೆ ಸಂಪೂರ್ಣವಾಗಿರುತ್ತದೆ. ಅಂದಮೇಲೆ ಸಂತುಷ್ಟಮಣಿಯಾಗಿರಿ. ಈಗ ಏನು ಮಾಡಬೇಕು? ತಿಳಿಯಿತೆ-

ಈಗಿನವರೆಗೂ ಯಾವ ಸೇವೆಯ ಸಾಧನಗಳಿವೆಯೋ ಅದನ್ನು ಸಾರವಾಗಿಯೇ ಸೇವೆಯಂತು ಮಾಡುತ್ತಿದ್ದೀರಿ - ಲಗನ್ನಿನಿಂದ ಮಾಡುತ್ತಿದ್ದೀರಿ, ಬಹಳ ಪರಿಶ್ರಮಪಡುತ್ತಿದ್ದೀರಿ, ಉಮ್ಮಂಗ-ಉಲ್ಲಾಸವೂ ಬಹಳ ಚೆನ್ನಾಗಿದೆ ಆದರೆ ಸೇವೆಯ ಜೊತೆಯಲ್ಲಿ ವಿಶ್ವದ ಸೇವೆ ಮತ್ತು ಸ್ವಯಂನ ಸೇವೆಯಾಗಲಿ. ವಿಶ್ವದ ಬಗ್ಗೆಯೂ ದಯಾಹೃದಯಿ ಮತ್ತು ಸ್ವಯಂನ ಬಗ್ಗೆಯೂ ದಯಾಹೃದಯಿಯಾಗಿರಿ. ಎರಡೂ ಜೊತೆ ಜೊತೆಯಿರಬೇಕು. ಅಷ್ಟರೊಳಗೆ ಸಂಪನ್ನವಾಗಿ ಬಿಡುತ್ತೇವೆ ಎಂದು ಸಮಯದ ನಿರೀಕ್ಷಣೆಯನ್ನು ಮಾಡಬಾರದು. ಯಾವಾಗ ಆತ್ಮರಿಗೆ ಹೇಳುತ್ತೀರಿ- ನಾಳೆಯಲ್ಲ. ಆದರೆ ಇಂದು, ಇಂದಲ್ಲ ಈಗ ಮಾಡಿರಿ ಎಂದು. ಈ ರೀತಿ ಮೊದಲು ತಮ್ಮೊಂದಿಗೆ ಮಾತನಾಡಿಕೊಳ್ಳಿರಿ- ಈ ರೀತಿ ಎವರೆಡಿ ಸಮಯಕ್ಕೆ ಮೊದಲು ತಯಾರಿಯಿದ್ದೇನೆಯೇ? ಸದಾ ಈ ಸ್ಮೃತಿಯಿರುತ್ತದೆಯೇ? ಈಗಿಲ್ಲದಿದ್ದರೆ ಇನ್ನೆಂದಿಗೂ ಇಲ್ಲ. ಈ ರೀತಿ - ಸ್ವಯಂನೊಂದಿಗೆ ವಾರ್ತಾಲಾಪ ಮಾಡಿರಿ. ಒಳ್ಳೆಯದು – ತಿಳಿಸುವುದಂತು ಬಹಳಷ್ಟಾಯಿತು. ಈಗ ಬಾಬಾರವರು ಏನನ್ನು ಬಯಸುತ್ತಾರೆ? ಈಗ ತಿಳಿಸುವ ಸಮಯವಲ್ಲ ಆದರೆ ನೋಡುವ ಸಮಯವಾಗಿದೆ. ಬಾಬಾರವರು ಒಂದೊಂದು ರತ್ನವನ್ನು ಸಂಪನ್ನ ಮತ್ತು ಸಂಪೂರ್ಣವಾಗಿರುವುದನ್ನು ನೋಡಲು ಬಯಸುತ್ತಾರೆ. ತಿಳಿಯಿತೇ.

**ಈ ರೀತಿ ಸೂಚನೆಯಿಂದ ತಿಳಿದುಕೊಳ್ಳುವವರು, ಕೇಳುವ ಮತ್ತು ಮಾಡುವುದನ್ನು ಸಮಾನತೆಯಲ್ಲಿ ತರುವ, ಸದಾ ಸಮರ್ಥ ತಂದೆಯ ಸಮರ್ಥ ನೆನಪಿನಲ್ಲಿರುವ, ಸಮರ್ಥ ಸ್ಥಿತಿಯಲ್ಲಿ ಇರುವಂತಹ ಸಫಲತಾ ಮೂರ್ತಿ ಶ್ರೇಷ್ಠ ಆತ್ಮರಿಗೆ ಬಾಪ್ ದಾದಾರವರ ನೆನಪು - ಪ್ರೀತಿ ಹಾಗೂ ನಮಸ್ತೆ.**

**ದಾದಿಯವರೊಂದಿಗೆ ವಾರ್ತಾಲಾಪ:-** ಮಹಾರಥಿಗಳನ್ನು ನೋಡಿ ಎಲ್ಲರೂ ಖುಷಿಯಾಗುತ್ತಾರೆ, ಏಕೆ ಖುಷಿಯಾಗುತ್ತದೆ? ಏಕೆಂದರೆ ಮಹಾರಥಿಯು ಸಾಕಾರ ತಂದೆಯ ಸಮಾನವಾಗಿ ಎಲ್ಲರ ಮುಂದೆ ಸಾಕಾರ ರೂಪದಲ್ಲಿ ಸಂಪನ್ನ ಅಥವಾ ಶ್ರೇಷ್ಠವಾಗಿದ್ದಾರೆ ಆದ್ದರಿಂದ ಬಾಬಾರವರೂ ಸಹ ಮಹಾರಥಿಗಳನ್ನು ನೋಡಿ ಹರ್ಷಿತವಾಗುತ್ತಾರೆ ಏಕೆಂದರೆ ಸಮಾನವಾಗಿದ್ದೀರಿ. ಅಂದಮೇಲೆ ಸಮಾನರನ್ನು ನೋಡಿ ಖುಷಿಯಾಗುತ್ತದೆ. ಸಂಗಮದಲ್ಲಿಯೇ ತಂದೆಯು ಮಕ್ಕಳನ್ನು ಸೇವೆಯ ಸಿಂಹಾಸನಾಧಿಕಾರಿಯನ್ನಾಗಿ ಮಾಡುತ್ತಾರೆ- ಈ ಸಂಗಮಯುಗದ ರೀತಿ ಸಿಂಹಾಸನಾಧಿಕಾರಿಯನ್ನಾಗಿ ಮಾಡುತ್ತದೆ. ಸ್ವಯಂ ಗುಪ್ತರೂಪದಲ್ಲಿ ಸಿಂಹಾಸನಾಧಿಕಾರಿ ಮಕ್ಕಳನ್ನು ನೋಡುತ್ತಿರುತ್ತಾರೆ, ಸಹಯೋಗವೂ ಇದೆ ಆದರೆ ಮಕ್ಕಳನ್ನೇ ಪ್ರತ್ಯಕ್ಷದಲ್ಲಿ ಸಿಂಹಾಸನಾಧಿಕಾರಿಯನ್ನಾಗಿ ಮಾಡುತ್ತಾರೆ. ಈ ಪದ್ಧತಿಯು ಈಗಿನಿಂದ ಆರಂಭವಾಗುತ್ತದೆ. ಮಾಡಿ ಮಾಡಿಸುವವರಾಗಿದ್ದಾರೆ ಅಂದಮೇಲೆ ಮಾಡುವವರ ಪಾತ್ರವನ್ನೂ ಅಭಿನಯಿಸಿದರು ಮತ್ತು ಈಗ ಮಾಡಿಸುವವರ ಪಾತ್ರವನ್ನೂ ಅಭಿನಯಿಸುತ್ತಿದ್ದಾರೆ. ತಂದೆಯ ಸಿಂಹಾಸನವಾಗಿರುವ ಕಾರಣದಿಂದ

ಸಿಂಹಾಸನಾಧಿಕಾರಿ ಆಗುವುದರಲ್ಲಿ ಹೊರೆಯ ಅನುಭವವಾಗುವುದಿಲ್ಲ ಏಕೆಂದರೆ ತಂದೆಯ ಸಿಂಹಾಸನವಲ್ಲವೆ. ಮತ್ತು ಸ್ವಯಂ ತಂದೆಯು ಸಿಂಹಾಸನಾಧಿಕಾರಿಯನ್ನಾಗಿ ಮಾಡಿದರು. ನಿಮಿತ್ತವಾಗುವ ಈ ಸಿಂಹಾಸನವು ಎಷ್ಟು ಸಹಜವಾಗಿದೆ. ಸಿಂಹಾಸನದ ವಿಶೇಷತೆಯಿದೆ, ಈ ಸಿಂಹಾಸನದಲ್ಲಿಯೇ ವಿಶೇಷವಾದ ಜಾದೂ ಅಡಗಿದೆ, ಅದು ಸೆಕೆಂಡಿನಲ್ಲಿ ಕಷ್ಟವೂ ಸಹ ಸಹಜವಾಗಿಬಿಡುತ್ತದೆ. ಈ ನಿಮಿತ್ತವಾಗುವ ಸಿಂಹಾಸನವು ಸಮಯದನುಸಾರ, ಡ್ರಾಮಾದನುಸಾರವಾಗಿ ಸರ್ವಶ್ರೇಷ್ಠ ಸಿಂಹಾಸನ ಮತ್ತು ಅತಿ ಸಫಲತಾ ಸಂಪನ್ನ ಸಿಂಹಾಸನ ಎಂದು ಗಾಯನ ಮಾಡಲ್ಪಟ್ಟಿದೆ. ಯಾರೆಲ್ಲರೂ ಸಿಂಹಾಸನದ ಮೇಲೆ ಕುಳಿತರು ಸಫಲತಾ ಮೂರ್ತಿ, ಸಿಂಹಾಸನಕ್ಕೆ ಈ ಅನಾದಿ ಆದಿ ವರದಾನವಿದೆ. ಈ ಸಿಂಹಾಸನದ ಸಿಂಹಾಸನಾಧಿಕಾರಿಯೂ ಸಹ ಬಹಳ ಗುಹ್ಯ ರಹಸ್ಯ ಮತ್ತು ರಹಸ್ಯಯುಕ್ತ ಆತ್ಮರೇ ಆಗುತ್ತಾರೆ. ಬಾಪ್‌ದಾದಾರವರು ವರ್ತಮಾನ ಸಮಯದಲ್ಲಿಯೂ ಮಹಾರಥಿಗಳನ್ನು ಡಬಲ್ ಸಿಂಹಾಸನಾಧಿಕಾರಿಯನ್ನಾಗಿ ನೋಡುತ್ತಾರೆ. ಹೃದಯಸಿಂಹಾಸನವಂತೂ ಇದ್ದೇ ಇದೆ ಆದರೆ ಈ ನಿಮಿತ್ತವಾಗುವ ಸಿಂಹಾಸನವು ಬಹಳ ಕೆಲವರಿಗೇ ಪ್ರಾಪ್ತಿಯಾಗುತ್ತದೆ. ಈ ರಹಸ್ಯವೂ ಸಹ ಬಹಳ ಗುಹ್ಯವಾಗಿದೆ. ಒಳ್ಳೆಯದು-

**ಮಧುಬನ ನಿವಾಸಿ ಸಹೋದರರೊಂದಿಗೆ:-** ಮಧುಬನ ನಿವಾಸಿಗಳು ಬಹಳಷ್ಟು ಕೇಳಿದ್ದೀರಿ, ಕೇಳುವುದಕ್ಕೆ ಏನಾದರೂ ಉಳಿದುಕೊಂಡಿದೆಯೇ? ಸನ್ಮುಖದಲ್ಲಿ ಕೇಳಿದ್ದೀರಿ, ರಿವೈಜ್ ಕೋರ್ಸ್ ಸಹ ಕೇಳಿದ್ದೀರಿ, ಈಗ ಇನ್ನೇನು ಕೇಳುವುದಿದೆ? ಎಷ್ಟು ಬಾಣಗಳು ತುಂಬಿಕೊಂಡಿದ್ದೀರಿ, ಅಷ್ಟು ಬಾಣಗಳನ್ನು ಬಿಟ್ಟಿದ್ದೀರಾ? ಮಧುಬನ ನಿವಾಸಿಗಳಿಗೆ ಮೂರು ಪ್ರಕಾರದ ಸೇವೆಯ ಅವಕಾಶವಿದೆ- ವಿಶೇಷವಾಗಿ ಯಾವ ಪ್ರಕಾರದ ಸೇವೆಯ ಅವಕಾಶವಿದೆ? ವಿಶೇಷವಾಗಿ ಮಧುಬನ ನಿವಾಸಿಗಳಿಗೆ ಸಹಜ ಸೇವೆಯ ಸಾಧನವು ಈ ವರದಾನಭೂಮಿ ಅಥವಾ ಚರಿತ್ರೆಯ ಭೂಮಿಯ ಆಧಾರವಿದೆ, ಈ ಭೂಮಿಯ ಚರಿತ್ರೆಯ ಮಹಿಮೆಯನ್ನೇನಾದರೂ ಒಂದು ವೇಳೆ ಯಾವುದೇ ಆತ್ಮನಿಗೆ ತಿಳಿಸುತ್ತೀರೆಂದರೆ- ಹೇಗೆ ಗೀತೆಯನ್ನು ಕೇಳಲು ಆಸಕ್ತಿಯಿಡುವುದಿಲ್ಲವೋ, ಭಾಗವತವನ್ನು ಕೇಳುವುದರಲ್ಲಿ ಆಸಕ್ತಿಯಿಡುವುದಿಲ್ಲ, ಅದೇ ರೀತಿ ಪ್ರತ್ಯಕ್ಷ ಚರಿತ್ರೆಯನ್ನು ತಿಳಿಸುವುದರ ಸಾಧನವು ಮಧುಬನದವರಿಗಿದೆ. ಈ ಸ್ಥಾನ ಮತ್ತು ಚರಿತ್ರೆಯ ಪರಿಚಯವನ್ನೂ ಕೊಡುತ್ತೀರೆಂದರೆ ಆತ್ಮರು ಖುಷಿಯಲ್ಲಿ ನರ್ತಿಸುತ್ತಾರೆ. ಯಾವಾಗ ಯಾರೇ ಬರುತ್ತಾರೆಂದರೆ ವಿಶೇಷವಾಗಿ ಚರಿತ್ರೆಯ ಭೂಮಿಯನ್ನು ತಿಳಿಯಲು ಮತ್ತು ಅನುಭವ ಮಾಡಲು ಬರುತ್ತಾರೆ, ಅಂದ ಮೇಲೆ ಮಧುಬನ ನಿವಾಸಿಗಳು ಭಾಗವತದ ಮೂಲಕ ಸೇವೆಯನ್ನು ಮಾಡಬಹುದು- ಇಲ್ಲಿ ಈ ರೀತಿಯಾಗುತ್ತದೆ. ಅಂದ ಮೇಲೆ ತಾವುಗಳು ಧರಣಿಯ ವಿಶೇಷತೆಯ ಮಹತ್ವಿಕೆಯನ್ನು ತಿಳಿಸಲು ನಿಮಿತ್ತವಾಗಿದ್ದೀರಿ. ಯಾವ ದೃಷ್ಟಿಯಿಂದ ಎಲ್ಲಾ ಆತ್ಮರು ಒಂದೊಂದು ರತ್ನವನ್ನು ನೋಡುತ್ತಾರೆಯೋ ಅದೇರೀತಿ ಅವರನ್ನು ತಂದೆಯ ಕಡೆ ಆಕರ್ಷಣೆ ಮಾಡಬೇಕು, ಅಂದಮೇಲೆ ಎಷ್ಟು ಸೇವೆ ಇದೆ? ಇಲ್ಲಿ ಕುಳಿತುಕೊಂಡೇ ಪ್ರಜೆಗಳನ್ನು ತಯಾರು ಮಾಡಬಹುದು ಅಥವಾ ಪರಿವಾರದವರು ಆಗಬಹುದು. ಹೇಗೆ ತಾಜ್‌ಮಹಲಿನಲ್ಲಿ ಮಾರ್ಗದರ್ಶಿಗಳು ಎಷ್ಟೊಂದು ರಮಣೀಕತೆಯಿಂದ ಚರಿತ್ರೆಯನ್ನು ತಿಳಿಸುತ್ತಾರೆ, ಅದೇರೀತಿ ಚರಿತ್ರೆಯನ್ನು ತಾವು ತಿಳಿಸುತ್ತೀರೆಂದರೆ ಅವರಿಗೆ ಸಹಜವಾಗಿಯೇ ನೆನಪಿರುತ್ತದೆ ಮತ್ತು ಆ ಸೇವೆಯ ಫಲವು ತಮಗೆ ಸಿಗುತ್ತದೆ. ಯಾರೇ ಬಂದರೂ ಸಹ ಅವರಿಗೆ ಖುಷಿ-ಖುಷಿಯಿಂದ, ಲಗನ್ನಿನಿಂದ, ಮಹತ್ತಿಕೆಯಲ್ಲಿ ಸ್ಥಿತರಾಗಿದ್ದು ಮಹತ್ವಿಕೆಯನ್ನು ತಿಳಿಸುತ್ತೀರೆಂದರೆ ಬಹಳ ಅಧಿಕಾಂಶದ ಫಲವನ್ನು ತೆಗೆದುಕೊಳ್ಳಬಹುದು- ಇಂತಹ ಸೇವೆಯನ್ನು ಮಾಡುವುದರಿಂದ ಬಹಳ ಖುಷಿಯಿರುತ್ತದೆ. ಅಂದಮೇಲೆ ಸೇವೆಯೂ ಆಯಿತು, ನೆನಪೂ ಇದ್ದಿತು ಮತ್ತು ಪ್ರಾಪ್ತಿಯೂ ಆಯಿತು ಮತ್ತೇನು ಬೇಕು? ಮಧುಬನ ನಿವಾಸಿಗಳು ಇಷ್ಟು ಅದೃಷ್ಟವಂತರಾಗಿದ್ದೀರಿ.

ಈ ವರ್ಷದಲ್ಲಿ ವಿಶೇಷವಾಗಿ ಸ್ವಯಂ ಮತ್ತು ಸೇವೆಯ ಸಮತೋಲನವಿರಬೇಕು. ಸೇವೆಯ ಜೊತೆಯಲ್ಲಿ ಸ್ವಯಂನ ವ್ಯಕ್ತಿತ್ವ ಮತ್ತು ಪ್ರಭಾವ ಅಥವಾ ಧಾರಣಾಮೂರ್ತಿಯ ಪ್ರಭಾವವು ಚಿನ್ನದ ಮೇಲೆ ಲೇಪನದ ಕಾರ್ಯವನ್ನು ಮಾಡುತ್ತದೆ. ಯಾರೇ ನೋಡಿದರೂ ಸಹ ಅನುಭವ ಮಾಡಲಿ- ಜ್ಞಾನಮೂರ್ತಿ ಮತ್ತು ಗುಣಮೂರ್ತಿ ಆಗಿದ್ದಾರೆ. ಎರಡರ ಸಮಾನತೆಯು ಕಂಡು ಬರಲಿ. ಈಗಿನವರೆಗೂ ಧ್ವನಿಯು ಬರುತ್ತಿದೆ- ಜ್ಞಾನವು ಶ್ರೇಷ್ಠವಾಗಿದೆ ಆದರೆ ಚಲನೆಯು ಆ ರೀತಿಯಿಲ್ಲ. ಅಂದಮೇಲೆ ಎರಡರ ಬ್ಯಾಲೆನ್ಸ್‌ನ ಗಮನವಿಡುವುದರಿಂದ ಪ್ರಜೆ ಅಥವಾ ವಾರಸುಧಾರರು ಕಂಡುಬರುತ್ತಾರೆ. ಸೇವೆಯ ಸಾಧನವಂತು ಬಹಳಷ್ಟಿದೆ- ಈಗ

ಧರ್ಮನೇತರವರೆಗೆ ತಲುಪಿಲ್ಲ, ಯಾವುದು ಅಂತಿಮ ಯುದ್ಧವಿದೆಯೋ ಅದರಿಂದ ನಾಲ್ಕೂಕಡೆಯಲ್ಲಿ ಶಬ್ದವು ಹರಡಿಬಿಡುತ್ತದೆ. ಇದು ಜ್ಞಾನದ ಮಾತಿನಿಂದಾಯಿತು. ಹೇಗೆ ಗೀತೆಯ ಭಗವಂತನ ಮಾತಿನಿಂದ ಹೆಸರು ಪ್ರಸಿದ್ಧವಾಗಬೇಕು. ಇದಕ್ಕಾಗಿ ಚಿಕ್ಕ-ಚಿಕ್ಕ ಗ್ರೂಪ್‌ನ್ನು ಮಾಡಿರಿ, ನಾಲ್ಕೂಕಡೆಯಲ್ಲಿ ತಮ್ಮ ಸಹಯೋಗಿಯನ್ನಾಗಿ ಕೆಲವರನ್ನು ಮಾಡಿಕೊಳ್ಳಿರಿ, ವಿದ್ಯಾರ್ಥಿಗಳಿಗೆ ಪ್ರತಿಸ್ಪರ್ಧೆಯನ್ನು ಇಟ್ಟಿದ್ದಿರಲ್ಲವೆ, ನಂತರ ಅದರಲ್ಲಿ ಒಬ್ಬರನ್ನು ಆಯ್ಕೆ ಮಾಡಿಕೊಳ್ಳಲಾಯಿತು. ಈ ರೀತಿ ಪ್ರತೀ ಸ್ಥಾನದಲ್ಲಿಯೂ ಚಿಕ್ಕ-ಚಿಕ್ಕ ಗ್ರೂಪ್ ಆಯಿತು, ಆದನಂತರ ಅವರೆಲ್ಲರನ್ನೂ ಒಂದು ಸ್ಥಾನದಲ್ಲಿ ಸಂಘಟನೆಯನ್ನು ಮಾಡಿರಿ ನಂತರ ಹೆಸರು ಪ್ರಸಿದ್ಧ ಆಗುತ್ತದೆ. ಈ ವರ್ಷವಿರುವುದೇ ಹೆಸರನ್ನು ಪ್ರಸಿದ್ಧ ಮಾಡುವ ವರ್ಷ. ಒಳ್ಳೆಯದು.

ಅವ್ಯಕ್ತ ಮುರಳಿ 14-11-1978.

***ಸಮಯದ ಕರೆ***

ಸಮಯಾನುಸಾರ ಸಮರ್ಥತೆಯ ಖಾತೆಯು 99% ಇರಬೇಕು. ಸರ್ವಗುಣ ಸಂಪನ್ನ ಹದಿನಾರುಕಲಾ ಸಂಪೂರ್ಣ ಆತ್ಮರನ್ನೆ ಸತೋಪ್ರಧಾನ ರಾಜ್ಯವು ಆಹ್ವಾನ ಮಾಡುತ್ತದೆ. ವರ್ತಮಾನ ಸಮಯ, ಸಂಕಲ್ಪ ಮತ್ತು ಸಮಯದ ಮೇಲೆ ಅಧಿಕಾರಿಗಳೇ ಸತೋಪ್ರಧಾನ ಆದಿಕಾಲದ ಸರ್ವರ ಸತ್ಕಾರವನ್ನು ಪ್ರಾಪ್ತಿ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಎಂದು ಹೇಳುತ್ತಾ ಶಿವಪರಮಾತ್ಮ ಹೇಳಿರುವ ಮಹಾವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಪವಿತ್ರ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸರ್ವಶ್ರೇಷ್ಠ ತಂದೆಯ ಡೈರೆಕ್ಟ್ ಸಂತಾನ, ತಂದೆ ಸಮಾನ ಸಮರ್ಥ ಸ್ವರೂಪ.

2. ನಾನು ಸಮರ್ಥ ಖಾತೆಯನ್ನು ಪೂರ್ಣ ಪ್ರತಿಶತವಾಗಿಸಿಕೊಂಡು, 100%ಪ್ರತಿಶತ ಸತೋಪ್ರಧಾನ ರಾಜ್ಯಕ್ಕೆ ಅಧಿಕಾರಿಯಾಗಿದ್ದೇನೆ.

3. ಈಗ ನಾನು ಸಂಗಮಯುಗದ ಸಮಯ, ಸಂಕಲ್ಪಗಳ ಮೇಲೆ ಅಧಿಕಾರಿಯಾಗುವುದರ ಮೂಲಕ ಸತ್ಯಯುಗದಲ್ಲಿ ವಿಶ್ವರಾಜ್ಯಾಧಿಕಾರಿಯಾಗಿ ಸರ್ವರಿಂದ ಗೌರವವನ್ನು ಪಡೆದಿದ್ದೇನೆ.

4. ನಾನು ಈಗ ಸ್ವರಾಜ್ಯಾಧಿಕಾರಿಯಾಗಿ, ಸತ್ಯಯುಗದಲ್ಲಿ ವಿಶ್ವರಾಜ್ಯಾಧಿಕಾರಿಯಾಗಿದ್ದೇನೆ.

5. ನಾನು ಅಂತರ್ಮುಖಿಯಾಗಿ ಸ್ವಚಿಂತನೆ ಮಾಡಿ ವರ್ತಮಾನ ಸಮಯವನ್ನು ಸದಾ ಸಮರ್ಥವಾಗಿ ಉಪಯೋಗಿಸಿಕೊಂಡಿರುವ ಆದಿಕಾಲದ ಅಧಿಕಾರಿ.

6. ನಾನು ನನ್ನ ಜಮಾಖಾತೆಯಿಂದ ಸಂತುಷ್ಟವಾಗಿ ಇರುತ್ತಾ ಇತರರನ್ನು, ಪ್ರಕೃತಿಯನ್ನು ಸಂತುಷ್ಟ ಮಾಡುವ ಸಂತುಷ್ಟಮಣಿ.

7. ನಾನು ಸ್ವಯಂನ ಪ್ರತಿ ಮತ್ತು ವಿಶ್ವದ ಪ್ರತಿ ದಯಾಹೃದಯಿಯಾಗಿ ಸಮಯಕ್ಕಿಂತ ಮೊದಲೇ ಸಂಪನ್ನವಾಗಿ ತಯಾರಾಗಿದ್ದೇನೆ.

8. ನಾನು ನಾಳೆಯಲ್ಲ ಇಂದು, ಇಂದು ಕೂಡ ಅಲ್ಲ ಈಗಲೇ "ಈಗಿಲ್ಲದಿದ್ದರೆ ಇನ್ನೆಂದಿಗೂ ಇಲ್ಲ" ಎಂಬ ಸ್ಲೋಗನನ್ನು ಸದಾ ಸ್ಮೃತಿಯಲ್ಲಿಟ್ಟುಕೊಂಡು ಧಾರಣೆ ಮಾಡಿದ್ದೇನೆ.